# ವಿಶ್ವನಂದಿನಿ ಲೇಖನಮಾಲೆ — 80

## ನಿಯತಪತಿಪತ್ನಿಭಾವ

ಶ್ರೀಧರ ಕಾನುಗೋವಿಯವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ.

**ನಿಯತಪತಿಪತ್ನಿಯರ ನಿಯಮ ದೇವತೆಗಳಲ್ಲಿ ಮಾತ್ರವೋ ಅಥವಾ ಎಲ್ಲ ಮುಕ್ತಿಯೋಗ್ಯರಲ್ಲಿಯೂ ಇರುತ್ತದೆಯೋ?**

ಇದಕ್ಕೆ ಉತ್ತರ —

**ನಿಯತಪತಿಪತ್ನಿಭಾವ ದೇವತೆಗಳಷ್ಟೇ ಅಲ್ಲ, ಮುಕ್ತಿಯೋಗ್ಯರಷ್ಟೇ ಅಲ್ಲ, ಸಾಮಾನ್ಯವಾಗಿ ಸಮಸ್ತ ಜೀವರಲ್ಲಿಯೂ ಇರುತ್ತದೆ.**

ಈಗ ಇದನ್ನು ವಿವರಿಸುತ್ತೇನೆ.

ಪರಮಾತ್ಮನಿಗೂ, ದೇವತೆಗಳಿಗೂ ನಮಗೂ ಇರುವ ಅಲೌಕಿಕ ಸಂಬಂಧವನ್ನು ಹೊರತುಪಡಿಸಿ ಜಗತ್ತಿನಲ್ಲಿ ಶಾಶ್ವತವಾದ ಸಂಬಂಧಗಳು ಎರಡೇ, ಒಂದು ಗುರುಶಿಷ್ಯಸಂಬಂಧ ಮತ್ತೊಂದು ಗಂಡ ಹೆಂಡತಿ ಸಂಬಂಧ.

**ಜೀವರು ಮುಕ್ತರಾದ ನಂತರವೂ ಪತಿ ಪತ್ನಿಯರಾಗಿ ಇರುತ್ತಾರೆ. ಹೀಗೆ ಮೋಕ್ಷದಲ್ಲಿಯೂ ಪತ್ನಿಯಾಗಿ ಇರುವವಳನ್ನು ನಿಯತಪತ್ನಿ ಎನ್ನುತ್ತಾರೆ, ಮೋಕ್ಷದಲ್ಲಿಯೂ ಗಂಡನಾಗಿ ಇರುವವನನ್ನು ನಿಯತಪತಿ ಎನ್ನುತ್ತಾರೆ.**

ಉದಾಹರಣೆಗೆ, ಚತುರ್ಮುಖಬ್ರಹ್ಮದೇವರ ಪತ್ನಿ ಸರಸ್ವತೀದೇವಿ. ಮಹಾರುದ್ರದೇವರ ಪತ್ನಿ ಪಾರ್ವತೀದೇವಿ. ಇಂದ್ರನ ಪತ್ನಿ ಶಚೀದೇವಿ.

ಇವರೆಲ್ಲರೂ ಅನಾದಿಕಾಲದಿಂದಲೂ ಗಂಡಹೆಂಡಿರಾಗಿಯೇ ಇದ್ದಾರೆ, ಮೋಕ್ಷದಲ್ಲಿಯೂ ಗಂಡಹೆಂಡತಿಯರಾಗಿಯೇ ಇರುತ್ತಾರೆ. ಆದ್ದರಿಂದ ಇವರನ್ನು ನಿಯತಪತಿಪತ್ನಿಯರು ಎನ್ನುತ್ತಾರೆ.

ದೇವತೆಗಳಲ್ಲಿ ನಿಯತಪತಿಪತ್ನಿಭಾವವಿದ್ದಂತೆ ಋಷಿಗಳಲ್ಲಿಯೂ ಇದೆ. ವಸಿಷ್ಠ ಅರುಂಧತಿ, ಅತ್ರಿ ಅನಸೂಯಾ, ಗೌತಮ ಅಹಲ್ಯೆ, ಯಾಜ್ಞವಲ್ಕ್ಯ ಮೈತ್ರೇಯೀ ಮುಂತಾಗಿ.

ಚಕ್ರವರ್ತಿ, ಮಹಾರಾಜರಲ್ಲಿಯೂ ನಿಯತಪತಿಪತ್ನಿಭಾವವಿದೆ. ಪೃಥು ಅರ್ಚಿ, ದುಃಷಂತ ಶಕುಂತಲಾ ಮುಂತಾಗಿ.

ಹಾಗೆಯೇ ಮನುಷ್ಯರಲ್ಲಿಯೂ ನಿಯತಪತಿಪತ್ನಿಭಾವವಿದೆ.

ಆದರೆ, ಇವರನ್ನುಳಿದ ಕೆಲವು ವರ್ಗಗಳಿವೆ, ಯೋಗಿಗಳು, ಅಪ್ಸರೆಯರು ಮತ್ತು ಕೆಲವು ಮನುಷ್ಯರು.

ಈ ಯೋಗಿಗಳಿಗೆ ನಿಯತಪತ್ನಿಯರಿರುವದಿಲ್ಲ. ಅವರು ಮೋಕ್ಷದಲ್ಲಿಯೂ ಪತ್ನೀರಹಿತರಾಗಿಯೇ ಇರುತ್ತಾರೆ. ಉದಾಹರಣೆಗೆ ಶ್ರೀ ನಾರದರು, ಸನಕ ಸನಂದನ ಸನಾತನರು. ಸನತ್ಕುಮಾರ ಮನ್ಮಥನ ಅವತಾರ. ಹೀಗಾಗಿ ಅವನಿಗೆ ನಿಯತಪತ್ನಿಯಿದ್ದಾಳೆ, ರತೀದೇವಿ.

ಇನ್ನು ಅಪ್ಸರಸೆಯರು. ಇವರಿಗೂ ಸಹ ನಿಯತಪತಿಯರು ಇರುವದಿಲ್ಲ. ಇವರು ಅನೇಕ ಜನ ಪುರುಷರ ಜೊತೆಯಲ್ಲಿ ಸಂಪರ್ಕವನ್ನು ಹೊಂದಿದರೂ ಅದು ದೋಷವಲ್ಲ[1]. ಈ ಊರ್ವಶೀ, ಮೇನಕಾ, ರಂಭಾ, ತಿಲೋತ್ತಮಾ ಮುಂತಾದ ಮಹಾನುಭಾವರು ತಮಗಿಂತ ಜ್ಞಾನ ಭಕ್ತಿ ಮುಂತಾದ ಯೋಗ್ಯತೆಯಲ್ಲಿ ಅಧಿಕರಾದ ಯಾವುದೇ ಪುರುಷನ ಜೊತೆಯಲ್ಲಿ ಬೇಕಾದರೂ ಸಂಪರ್ಕವನ್ನು ಹೊಂದುವ ಅಧಿಕಾರವನ್ನು ಪಡೆದಿರುತ್ತಾರೆ.

ಇನ್ನು ಮನುಷ್ಯರು. ಇವರಲ್ಲಿ ಕೆಲವರು ನಿಯತಪತಿಪತ್ನಿಭಾವವನ್ನೂ ಹೊಂದಿದ್ದಾರೆ, ಕೆಲವರು ಹೊಂದಿರುವದಿಲ್ಲ.

---

[1] ವೇಶ್ಯಾಪದ್ಧತಿಯ ಬಗ್ಗೆ ಶಾಸ್ತ್ರದಲ್ಲಿ ಉದಾರವಾದ ಚಿಂತನೆಗಳಿವೆ. ಇವತ್ತು ಮಾನವೀಯ ಮೌಲ್ಯದ ಬಗ್ಗೆ ಮಾತನಾಡುವ ಮಂದಿ ವೇಶ್ಯೆಯರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಕೆಲವು ಶತಮಾನಗಳ ಹಿಂದೆ ಶಾಸ್ತ್ರದಲ್ಲಿ ಹೇಳಿದ ತತ್ವವನ್ನು ಅರಿಯದೇ ಅನಿಷ್ಟವಾದ ದೇವದಾಸಿಪದ್ಧತಿಯೂ ಇಲ್ಲಿ ಆಚರಣೆಯಿತ್ತು. ಆದರೆ, ವೇಶ್ಯಾಪದ್ಧತಿಯಬಗ್ಗೆ ನಮ್ಮ ಪುರಾಣಕಾಲೀನ ಭಾರತದಲ್ಲಿಯಿದ್ದಷ್ಟು ಉದಾತ್ತ ಚಿಂತನೆ ಮತ್ತು ನಡವಳಿಕೆ ಇನ್ನ್ಯಾವ ಕಾಲದಲ್ಲಿಯೂ ಇರಲಿಲ್ಲ. ಇದರ ಕುರಿತು ಪ್ರತ್ಯೇಕವಾಗಿ ಬರೆಯುತ್ತೇನೆ.

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಶ್ರೀ ಭಾಗವತತಾತ್ಪರ್ಯನಿರ್ಣಯದಲ್ಲಿ ಈ ತತ್ವವನ್ನು ನಿರ್ಣಯಿಸಿದ್ದಾರೆ —

“ದೇವಾಃ ಸಜಾಯಾ ಮುಚ್ಯಂತೇ
ಮಾನುಷಾಸ್ತೂಭಯಾತ್ಮಕಾಃ ।
ವಿಜಾಯಾ ಏವ ಯೋಗೇಶಾಃ
ತೇಷಾಂ ಯಾಯ್ಯೈವ ಯೋಗ್ಯತಾ ।
ತಥಾತಥೈವ ಮುಚ್ಯಂತೆ
ನಾನ್ಯಥಾ ತು ಕಥಂಚನ” ಎಂದು.

ಎಲ್ಲ ದೇವತೆಗಳಿಗೆ ನಿಯತಪತ್ನಿಯರಿದ್ದಾರೆ. ಆ ಗಂಡಹೆಂಡಿರು ಒಟ್ಟಿಗೇ ಮುಕ್ತರಾಗುತ್ತಾರೆ. ಸನಕ-ನಾರದಾದಿ ಯೋಗಿಗಳಿಗೆ ಪತ್ನಿಯರಿರುವದಿಲ್ಲ. ಅವರು ಪತ್ನೀರಹಿತರಾಗಿಯೇ ಮುಕ್ತರಾಗುತ್ತಾರೆ. ಮನುಷ್ಯರಲ್ಲಿ ಎರಡೂ ತರಹದ ಗುಂಪಿನ ಜನ ಇದ್ದಾರೆ. ಸಪತ್ನೀಕರೂ ಇದ್ದಾರೆ, ಪತ್ನೀರಹಿತರೂ ಇದ್ದಾರೆ. ಯಾರ ಯೋಗ್ಯತೆ ಹೇಗಿದೆಯೋ ಹಾಗೆಯೇ ಮುಕ್ತಿಯನ್ನು ಪಡೆಯುತ್ತಾರೆ, ಅಂದರೆ, ಪತ್ನಿಯಿರುವವರು ಪತ್ನೀರಹಿತರಾಗಿ

ಮುಕ್ತರಾಗುವದಿಲ್ಲ, ಪತ್ನಿಯಿಲ್ಲದವರು ಸಪತ್ನೀಕರಾಗಿ ಮುಕ್ತರಾಗುವದಿಲ್ಲ.

ಮಹಾದೇವತೆಗಳು ಅವತಾರ ಮಾಡಿದಾಗ ಸಹ ಸಾಮಾನ್ಯವಾಗಿ  ಪತ್ನಿಯರ ಸಮೇತವಾಗಿಯೇ ಅವತರಿಸುತ್ತಾರೆ. ಯಮಧರ್ಮ ಧರ್ಮರಾಜನಾಗಿ ಅವತರಿಸಿದಾಗ ಅವನ ನಿಯತಮಡದಿ ಶ್ಯಾಮಲಾದೇವಿ ದೇವಕೀ ಎನ್ನುವ ಹೆಸರಿನಿಂದ ಹುಟ್ಟಿ ಅವನನ್ನು ಮದುವೆಯಾಗಿರುತ್ತಾಳೆ. ಹಾಗೆಯೇ ದ್ರೌಪದಿಯಲ್ಲಿಯೂ ಸಹ ಒಂದು ಅಂಶದಿಂದ ಹುಟ್ಟಿರುತ್ತಾಳೆ.

ಇಂದ್ರನ ನಿಯತಪತ್ನಿ ಶಚೀದೇವಿ ಚಿತ್ರಾಂಗದೆಯಾಗಿ ಹುಟ್ಟಿ ಅರ್ಜುನನ ಮಡದಿಯಾಗಿರುತ್ತಾಳೆ. ಹಾಗೆಯೇ ದ್ರೌಪದಿಯಲ್ಲೀಯೂ ಸಹ ಒಂದಂಶದಿಂದ ಅವತರಿಸಿರುತ್ತಾಳೆ.

ಮನುಷ್ಯರಿಗೆ ಪ್ರತೀಜನ್ಮದಲ್ಲಿಯೂ ತನ್ನ ನಿಯತ ಪತಿ ಅಥವಾ ನಿಯತಪತ್ನಿಯೇ ದೊರಕಬೇಕೆಂದು ನಿಯಮವಿಲ್ಲ. ಸಾಮಾನ್ಯವಾಗಿ ಸಾಧನಜನ್ಮಗಳು

ಆರಂಭವಾಗುತ್ತಿದ್ದಂತೆ ಅಂದರೆ ಶಾಸ್ತ್ರಾಧ್ಯಯನ, ಕರ್ಮಾನುಷ್ಠಾನ, ಧ್ಯಾನ ಮುಂತಾದ ಮಹಾಸತ್ಕರ್ಮಗಳನ್ನು ಆಚರಿಸಿ ನಾವು ಸಾಧನಮಾರ್ಗದಲ್ಲಿ ಮುನ್ನಡೆಯುವಾಗ ನಿಯತಪತಿಪತ್ನಿಯರು ಒಂದಾಗುತ್ತಾರೆ. ಕಾರಣ ಅವರು ಒಂದಾಗಿ ಸಾಧನೆ ಮಾಡಿದರೇ ಅವರಿಬ್ಬರಿಗೂ ಸಾಧನೆ ಸಂಪೂರ್ಣವಾಗುತ್ತದೆ.

**ಇವಳೇ ನನ್ನ ನಿಯತಪತ್ನಿ, ಇವರೇ ನನ್ನ ನಿಯತಪತಿ ಎಂದು ಯಾವಾಗ ಗೊತ್ತಾಗುತ್ತದೆ ?**

ಮಹತ್ತ್ವದ ಪ್ರಶ್ನೆ. :)

ಸಾಧನಮಾರ್ಗದಲ್ಲಿ ಮೊದಲ ಜ್ಞಾನೋದಯ ಅದು ನಮ್ಮ ಸಾಕ್ಷಾತ್ಕಾರ. ನಾವು ಯಾರು ಎಂದು ಗೊತ್ತಾಗುವದು. ನಮಗೇ ನಮ್ಮದೇ ಆದ ಒಂದು ಹೆಸರಿದೆ. (ಅಪ್ಪ ಅಮ್ಮ ಇಟ್ಟಿದ್ದಲ್ಲ, ನಮ್ಮ ಸ್ವರೂಪದ್ದು.) ಅದು ಶಾಶ್ವತವಾದ ಹೆಸರು.

ಹಾಗೆಯೇ ನಮ್ಮದೇ ಆದ ಒಂದು ಸಲ್ಲಕ್ಷಣಭರಿತವಾದ ರೂಪವಿದೆ. ಮೊದಲಿಗೆ ಅವುಗಳ ಸಾಕ್ಷಾತ್ಕಾರ ನಮಗಾಗಬೇಕು. ಅಂದರೆ

ನಮ್ಮ ಕುರಿತು ಜ್ಞಾನೋದಯ ನಮಗಾಗಬೇಕು.  ಆ ನಮ್ಮ ಕುರಿತ ಜ್ಞಾನದಲ್ಲಿಯೇ ನಮ್ಮ ಪತ್ನಿಯ/ಪತಿಯ ಕುರಿತ ಜ್ಞಾನವೂ ನಮಗುಂಟಾಗುತ್ತದೆ.

ಆ ನಂತರ ನಮ್ಮ ನಿಯತ ಗುರುಗಳ ಸಾಕ್ಷಾತ್ಕಾರ ನಮಗಾಗುತ್ತದೆ. ಅವರ ಪರಿಚಯ ಉಪದೇಶಗಳು ಮೊದಲೇ ಇರುತ್ತವೆ. ಆದರೆ, ನಾವು ಯಾರು ಎಂದು ತಿಳಿದ ಬಳಿಕ ನಾವು ನಮ್ಮ ಯೋಗ್ಯತೆ ಇರುವಷ್ಟು ನಮ್ಮ ಗುರುಗಳ ಬಗ್ಗೆ ತಿಳಿಯುತ್ತೇವೆ.

ಆ ನಂತರ ನಮ್ಮ ದೇಹದಲ್ಲಿದ್ದು ನಮ್ಮ ಮೇಲೆ ಅನುಗ್ರಹ ಮಾಡುತ್ತಿರುವ ಒಬ್ಬೊಬ್ಬ ದೇವತೆಯ ಸಾಕ್ಷಾತ್ಕಾರ ನಮಗಾಗುತ್ತದೆ. ಭೂಮಿಗೆ ಅಭಿಮಾನಿಯಾದ ದೇವತೆಯಿಂದ ಆರಂಭಿಸಿ ಇಂದ್ರನವರೆಗೆ ನಾವು ಸಾಕ್ಷಾತ್ಕಾರವನ್ನು ಪಡೆಯುತ್ತೇವೆ.

ಆ ನಂತರ ಪಾರ್ವತೀಪತಿಯಾದ ಶ್ರೀ ಮಹಾರುದ್ರದೇವರ ಸಾಕ್ಷಾತ್ಕಾರ. ಹಾಗೆಯೇ ವಾರುಣೀಪತಿ ಶೇಷದೇವರ, ಸುಪರ್ಣೀಪತಿ ಗರುಡದೇವರ ಸಾಕ್ಷಾತ್ಕಾರ.

ಆ ನಂತರ ಭಾರತೀಪತಿ ಮುಖ್ಯಪ್ರಾಣದೇವರ ಮತ್ತು ಸರಸ್ವತೀಪತಿ ಬ್ರಹ್ಮದೇವರ ದರ್ಶನ.

ಇವರೆಲ್ಲರ ಸಾಕ್ಷಾತ್ಕಾರವಾದ ಬಳಿಕ ನಮ್ಮ ಅಂತರ್ಯಾಮಿ ಲಕ್ಷ್ಮೀಪತಿ ಶ್ರೀವಿಷ್ಣುವಿನ ಸಾಕ್ಷಾತ್ಕಾರವನ್ನು ಪಡೆಯುತ್ತೇವೆ. ಇದನ್ನೇ ಅಪರೋಕ್ಷಜ್ಞಾನ ಎನ್ನುತ್ತಾರೆ.

ಈ ಎಲ್ಲ ಸಾಕ್ಷಾತ್ಕಾರಗಳನ್ನು ನಾವೂ ಪಡೆಯುತ್ತೇವೆ. ನಮ್ಮ ಪತ್ನಿಯೂ ಪಡೆಯುತ್ತಾಳೆ. ಹೀಗೆ ಹೃದಯದಲ್ಲಿ ಭಗವಂತನ ಸಾಕ್ಷಾತ್ಕಾರವನ್ನು ಪಡೆದ ಈ ಸಜ್ಜೀವರು ಮತ್ತೆ ಅನೇಕ ಜನ್ಮಗಳಲ್ಲಿ ಒಂದಾಗಿಯೇ ಹುಟ್ಟಿ ಮಹತ್ತರ ಸಾಧನೆಯನ್ನು ಮಾಡುತ್ತಾರೆ.

ಆ ನಂತರ ಚರಮದೇಹವನ್ನು ಪಡೆದು ಉತ್ಕ್ರಾಂತಿಯನ್ನು ಪಡೆಯುತ್ತಾರೆ. ಸೂರ್ಯಲೋಕ, ಚಂದ್ರಲೋಕಾದಿಗಳಲ್ಲಿ ಅನೇಕ ಸಾವಿರ ವರ್ಷಗಳವರೆಗೆ ಸುಖವನ್ನು ಅನುಭವಿಸಿ ಬ್ರಹ್ಮಾಂಡಪ್ರಳಯವಾದಾಗ ಲಿಂಗಶರೀರದ

ಭಂಗವನ್ನು ಮಾಡಿಕೊಂಡು ಪರಮಾತ್ಮನ ಉದರವನ್ನು ಸೇರುತ್ತಾರೆ.

ಆ ನಂತರ ಮುಂದಿನ ಸೃಷ್ಟಿಯಲ್ಲಿ ಶ್ವೇತದ್ವೀಪಕ್ಕೆ ಹೋಗಿ ಮಾಯಾಪತಿ ವಾಸುದೇವನ ಅನುಗ್ರಹವನ್ನು ಪಡೆದು ಅನಂತಕಾಲವದವರೆಗೆ ಪತಿಪತ್ನಿಯರಾಗೇ ಇದ್ದುಕೊಂಡು, ಸಚ್ಚಿದಾನಂದಮಯವಾದ ಶರೀರದಿಂದ ದಿವ್ಯಭೋಗಗಳನ್ನು ಅನುಭವಿಸುತ್ತ ಸುಖವಾಗಿರುತ್ತಾರೆ.

ಮೋಕ್ಷದಲ್ಲಿ ‘ಅನುಜ ತನುಜರಿಲ್ಲ’ ‘ದಾಯಾದಿಗಳ ಕಾಟವಿಲ್ಲ’ ಆದರೆ ಪೂರ್ಣಸುಖವನ್ನು ಅನುಭವಿಸುವ ಪತಿಪತ್ನಿಯರಿದ್ದಾರೆ. ಅಲ್ಲಿ ರಜಸ್ವಲಾ ದೋಷವಿರುವದಿಲ್ಲ. ಹಸಿವು ನೀರಡಿಕೆ ಇರುವದಿಲ್ಲ. ಆಯಾಸ ಬಳಲಿಕೆ ಇರುವದಿಲ್ಲ. ಗಂಡ ಹೆಂಡಿರ ಜಗಳವಿರುವದಿಲ್ಲ. ಗಂಡ ಹೆಂಡತಿಯರಿಗೆ ವಿರಹವೇದನೆಯರುವದಿಲ್ಲ. ಇರುವದೆಲ್ಲ ಒಂದೇ,  ಪರಮಾತ್ಮನ ಮತ್ತು ನಮ್ಮ ಗುರುಗಳ ದರ್ಶನವನ್ನು ಅಪೇಕ್ಷೆ ಪಟ್ಟಾಗಲೆಲ್ಲ

ಪಡೆಯುತ್ತ, ಶ್ರೀಹರಿಯನ್ನು ಹಾಡಿ ಹೊಗಳುತ್ತಾ ಪರಮಾತ್ಮನ ಸಾನ್ನಿಧ್ಯದಲ್ಲಿ ನಮ್ಮ ಪತಿ/ಪತ್ನಿಯೊಂದಿಗೆ ಅನಂತಕಾಲದ ವರೆಗೆ ಸುಖವಾಗಿರುವದು.

ಮೋಕ್ಷದಲ್ಲಿ ನಾವು ಅನುಭವಿಸುವ ಆನಂದದ ಪ್ರಕಾರವನ್ನು ಶ್ರೀಮಧ್ವವಿಜಯದ ಹನ್ನೊಂದನೆಯ ಸರ್ಗದ ಉಪನ್ಯಾಸದಲ್ಲಿ ವಿಸ್ತೃತವಾಗಿ ವಿವರಿಸಿದ್ದೇನೆ. ಆಲಿಸಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491